ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

**1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯ ಅಧಿನಿಯಮ 12(7)ರ ಅನ್ವಯ**
**ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಿಷಯ: 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ–'ರೇಡಿಯೇಟರ್ ಕೂಲೆಂಟ್' ಮೇಲೆ ಅನ್ವಯವಾಗುವ ಪ್ರವೇಶ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಪೂಮ್‌ಕುಡಿ ಏಜೆನ್ಸೀಸ್ ಪ್ರೈ. ಲಿ., ಬೆಂಗಳೂರು ಇವರ ದಿನಾಂಕ:19–05–2014ರ ಅರ್ಜಿ (ಟಿನ್: 29200066153)

**

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ನೋಂದಣಿದಾರರಾದ ಮೆ: ಪೂಮ್‌ಕುಡಿ ಏಜೆನ್ಸೀಸ್ ಪ್ರೈ. ಲಿ., 10/12, 1ನೇ ಅಡ್ಡರಸ್ತೆ, ಫೈರ್‌ವರ್ಕ್ಸ್ ಕಾಲೋನಿ, ಎಸ್.ಜಿ.ಎನ್. ಲೇಔಟ್, ಲಾಲ್‌ಬಾಗ್ ಕ್ರಾಸ್ ರಸ್ತೆ, ಬೆಂಗಳೂರು–560027 ಇವರು ಮೇಲ್ಕಂಡ ಅರ್ಜಿಯಲ್ಲಿ 'ರೇಡಿಯೇಟರ್ ಕೂಲೆಂಟ್' ಮೇಲೆ ಅನ್ವಯವಾಗುವ ಪ್ರವೇಶ ತೆರಿಗೆ ದರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯ ಪ್ರಕರಣ 12(7) ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**ಸ್ಪಷ್ಟೀಕರಣ ಆದೇಶ ಸಂಖ್ಯೆಕಟಿಇಜಿ/ಸಿಎಲ್‌ಆರ್/ಸಿಆರ್–03/14–15, ದಿ. 21–10–2014**

ಲೂಬ್ರಿಕೇಟಿಂಗ್ ಆಯಿಲ್ ಮತ್ತು ಪೆಟ್ರೋಲಿಯಂ ಉತ್ಪನ್ನವಾದ 'ರೇಡಿಯೇಟರ್ ಕೂಲೆಂಟ್'ಗೆ ದಿನಾಂಕ 30.03.2002ರ ಅಧಿಸೂಚನೆ ಸಂಖ್ಯೆ. ಎಫ್‌ಡಿ 11 ಸಿಇಟಿ 2002ರಲ್ಲಿ ಕೋಷ್ಟಕದ ಕ್ರ.ಸಂ.1 (viii) (a) ಪ್ರಕಾರ ಶೇ.5 ಪ್ರವೇಶ ತೆರಿಗೆ ಬಾಧ್ಯತೆ ಇರುತ್ತದೆ ಎಂದು ಸ್ಪಷ್ಟೀಕರಿಸಲಾಗಿದೆ.

(ಅಜಯ್ ಸೇಠ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು